ಬಹುಭಾಷಿಕತೆ ಮತ್ತು ಕನ್ನಡ

ಅಮರೇಂದ್ರ ಶೆಟ್ಟಿ ಆರ್.*

DOI: https://doi.org/10.5281/zenodo.24337525

ABSTRACT

ಬಹುಭಾಷಿಕ ಪರಿಸರವು ವೈವಿಧ್ಯಮಯ ಸಾಂಸ್ಕೃತಿಕ ಚಹರೆಗಳ ಸಂಕೇತವಾಗಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಇಂಗ್ಲಿಷ್‌ನಂತಹ ಪ್ರಬಲ ಭಾಷೆಗಳು ಯಜಮಾನಿಕೆ ಸಾಧಿಸುತ್ತಿದ್ದು, ಕನ್ನಡವೂ ಸೇರಿದಂತೆ ಅನೇಕ ಸ್ಥಳೀಯ ಭಾಷೆಗಳು ಅಸ್ತಿತ್ವದ ಬಿಕ್ಕಟ್ಟನ್ನು ಎದುರಿಸುತ್ತಿವೆ. ಐತಿಹಾಸಿಕವಾಗಿ ಸಂಸ್ಕೃತವು ಶಿಕ್ಷಣದಲ್ಲಿ ಅಧಿಪತ್ಯ ಸಾಧಿಸಿದ್ದಂತೆ, ಪ್ರಸ್ತುತ ಇಂಗ್ಲಿಷ್ ಮಾಧ್ಯಮದ ವ್ಯಾಮೋಹವು ತಳಮಟ್ಟದ ಜನರನ್ನು ಭಾಷಿಕ ಹಾಗೂ ಆರ್ಥಿಕ ಗೊಂದಲಕ್ಕೆ ದೂಡುತ್ತಿದೆ. ಮಾತೃಭಾಷಾ ಶಿಕ್ಷಣದ ನಿರ್ಲಕ್ಷ್ಯದಿಂದಾಗಿ ಮುಂದಿನ ತಲೆಮಾರಿನ ಸಾಂಸ್ಕೃತಿಕ ಬೇರುಗಳು ಸಡಿಲಗೊಳ್ಳುತ್ತಿವೆ. ಪ್ರಾದೇಶಿಕ ಭಾಷೆಗಳ ಸಬಲೀಕರಣಕ್ಕಾಗಿ ಸಮಾಜ, ಶಿಕ್ಷಣ ವ್ಯವಸ್ಥೆ ಮತ್ತು ಸರ್ಕಾರಗಳು ಜಂಟಿಯಾಗಿ ಪೂರಕ ನೀತಿಗಳನ್ನು ರೂಪಿಸಬೇಕಾದ ತುರ್ತು ಅಗತ್ಯವಿದೆ. ಇಲ್ಲವಾದಲ್ಲಿ, ಪ್ರಬಲ ಅನ್ಯಭಾಷೆಯ ಏಕಸ್ವಾಮ್ಯದಿಂದಾಗಿ ಬಹುಭಾಷಿಕತೆಯ ಸಹಜ ಸೌಂದರ್ಯ ಮತ್ತು ದೇಶೀಯ ಸಂಸ್ಕೃತಿಗಳು ನಶಿಸಿಹೋಗುವ ಅಪಾಯವಿದೆ ಎಂಬ ಎಚ್ಚರಿಕೆಯನ್ನು ಇಲ್ಲಿ ನೀಡಲಾಗಿದೆ.

KEYWORDS: ಬಹುಭಾಷಿಕತೆ, ಸಾಂಸ್ಕೃತಿಕ ಅಸ್ಮಿತೆ, ಶಿಕ್ಷಣ ಮಾಧ್ಯಮ, ಭಾಷಿಕ ಅಧಿಪತ್ಯ, ಸ್ಥಳೀಯ ಭಾಷೆಗಳು.

* **ಡಾ. ಅಮರೇಂದ್ರ ಶೆಟ್ಟಿ ಆರ್.,** ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

ಹಲವು ಭಾಷೆಗಳು ಒಂದು ಪ್ರದೇಶ ಅಥವಾ ಪರಿಸರದಲ್ಲಿ ಬಳಕೆಯಾಗುತ್ತಿದ್ದರೆ ಅದನ್ನು ಬಹುಭಾಷಿಕ ಪರಿಸರ ಎನ್ನಲಾಗುತ್ತದೆ. ಒಬ್ಬ ವ್ಯಕ್ತಿ ಏಕಕಾಲಕ್ಕೆ ಹಲವು ಭಾಷೆಗಳನ್ನು ಬಳಸಲು ಸಮರ್ಥನಾಗಿದ್ದರೆ ಆತನನ್ನು ಬಹುಭಾಷಿಕ ವ್ಯಕ್ತಿ ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಯಾವುದೇ ನಾಡು ಮತ್ತು ಜನಸಮುದಾಯ ತನ್ನ ಭಾಷೆ, ಸಾಹಿತ್ಯ, ಇತಿಹಾಸ, ಕಲಾಪರಂಪರೆಗಳ ಜೊತೆ ಆಳವಾದ ಸಂಬಂಧವನ್ನು ಹೊಂದಿರುತ್ತದೆ ಹಾಗೂ ಇವೆಲ್ಲವುಗಳ ಮೂಲಕ ವಿಶಿಷ್ಟ ಸಾಂಸ್ಕೃತಿಕ ಚಹರೆಗಳನ್ನು ಕೂಡ ಹೊಂದಿರುತ್ತದೆ. ಹಾಗೆಯೇ ಜನಸಮುದಾಯವೊಂದು ಹಲವು ಸಾಂಸ್ಕೃತಿಕ ಒಳರಚನೆಗಳನ್ನು ಹೊಂದಿರುವಂತೆ ಭಾಷಿಕವಾಗಿಯೂ ಬಹುರೂಪಿಯಾಗುತ್ತದೆ. ಅಲ್ಲಿ ಹಲವು ಸ್ಥರದ, ಭಿನ್ನ ಸಾಮರ್ಥ್ಯದ ಭಾಷಿಕ ಸಂಸಾರಗಳೂ ಇರುತ್ತವೆ. ಪ್ರತಿ ಸಂಸಾರಕ್ಕೆ ವಿಶಿಷ್ಟ ಘನತೆಯ ಅಸ್ತಿತ್ವ ಇರುತ್ತದೆ. ಆದ್ದರಿಂದಲೇ ಒಂದು ಪರಿಸರದ ಹಲವು ಭಾಷಿಕ ಸಂಸಾರಗಳ ಮಧ್ಯೆ ಸಾಮರಸ್ಯದ, ಈರ್ಷ್ಯೆಯ, ಸಂದೇಹಗಳ ಹಾಗೂ ಪೈಪೋಟಿಯ ಸಂಬಂಧ ಇರುತ್ತದೆ. ಬಹುಭಾಷಿಕ ಪರಿಸರದಲ್ಲಿ ಈ ಬಗೆಯ ಸಂಬಂಧಗಳ ಸ್ಥಿತಿ ಸಹಜ ಹಾಗೂ ನಿರಂತರವಾಗಿರುತ್ತವೆ. ಏಕೆಂದರೆ ಈ ಭಾಷಿಕ ಸಂಬಂಧಗಳು ಒಂದೆರಡು ದಿನಗಳಲ್ಲಿ ಪ್ರಭುತ್ವಗಳ ಆಜ್ಞೆಗಳ ಮೂಲಕವೋ ಅಥವಾ ವಿದ್ವಾಂಸರ ಪ್ರಮಾಣ ವಚನ ಬೋಧನೆಯ ಮೂಲಕವೋ ರೂಪುಗೊಂಡಿರುವುದಿಲ್ಲ; ಬದಲಾಗಿ ಸಹಜ ಒಡನಾಟಗಳ ಮೂಲಕ ರೂಪುಗೊಂಡಿರುತ್ತದೆ.

ಆದರೆ ಇತ್ತೀಚಿನ ದಶಕಗಳಲ್ಲಿ ಭಾರತದ ಎಲ್ಲೆಡೆ ಬಹುಭಾಷಿಕ ವ್ಯವಸ್ಥೆ ಕೆಲವು ಅನಪೇಕ್ಷಿತ ಒತ್ತಡಗಳಿಗೆ ಸಿಲುಕಿ ನಲುಗುತ್ತಿದೆ. ಅಲ್ಲಿ ಬಲಿಷ್ಠ ಭಾಷೆಗಳ ಪರವಾದ ವಾತಾವರಣ ರೂಪುಗೊಳ್ಳುತ್ತಿದೆ. ಹಲವು ಬೇರೆ ಬೇರೆ ಕಾಲ ಘಟ್ಟಗಳಲ್ಲಿ ವಲಸೆ ಬಂದ ಅಥವಾ ಅಲ್ಲಿಯ ಜನರೇ ಆಡಳಿತಶಾಹಿ ಒತ್ತಡಕ್ಕೆ ಸಿಲುಕಿ ಒಪ್ಪಿಕೊಂಡ ಅಥವಾ ಸಹಜವಾಗಿ ಬಂದಿರಬಹುದಾದ, ಅಥವಾ ಹೇರಿರಬಹುದಾದ, ಆಕ್ರಮಿಸಿಯೂ ಇರಬಹುದಾದ ಭಾಷೆಗಳನ್ನು ಪ್ರಧಾನ ಭೂಮಿಕೆಗೆ ತಂದು ಸ್ಥಳೀಯ ಮೂಲ ಭಾಷೆಗಳನ್ನು ಅನ್ಯಗಳ ನೆರಳಲ್ಲಿ ನಿಲ್ಲಿಸಲಾಗುತ್ತಿದೆ. ಆ ಮೂಲಕ ಮೂಲ ಭಾಷೆಗಳ ಸಾಂಸ್ಕೃತಿಕ ಅಸ್ಮಿತೆಗಳಿಗೆ ಅಭದ್ರತೆಯ ಭಾವವನ್ನು ಮೂಡಿಸಲಾಗುತ್ತಿದೆ. ಹಾಗೆಯೇ ಸ್ಥಳೀಯವಾದ ಪ್ರಬಲ ಭಾಷೆಗಳನ್ನು 'ಯಜಮಾನ' ಸ್ಥಾನದಲ್ಲಿ ಪ್ರತಿಷ್ಠಾಪಿಸುವ ಮತ್ತು ಅಲ್ಪಸಂಖ್ಯೆಯ ನುಡಿಗರಿರುವ ಭಾಷೆಗಳನ್ನು ಅವುಗಳೆದುರು ಮಂಡಿಯೂರುವಂತೆ ಮಾಡಲಾಗುತ್ತಿದೆ ಎನ್ನುವ ಆರೋಪವಿದೆ.

ಸ್ಥಳೀಯರ ಮಾತೃಭಾಷೆಗಳು ಎಷ್ಟರ ಮಟ್ಟಿಗೆ ಪ್ರಧಾನ ಭೂಮಿಕೆಗೆ ಎತ್ತಿ ತರಲ್ಪಟ್ಟ ಪ್ರಬಲ ಮತ್ತು ಅನ್ಯಗಳ ನೆರಳಲ್ಲಿ ನಿಕೃಷ್ಟಗೊಳ್ಳುತ್ತಿವೆ ಹಾಗೂ ಕೀಳರಿಮೆಯಿಂದ ನರಳುತ್ತಿವೆ ಎಂದರೆ ಭಾಷೆಗಳ ಅವನತಿಯ ಆತಂಕವನ್ನು ಸಾರಾಸಗಟಾಗಿ ತಳ್ಳಿಹಾಕುವ ಭಾಷಾ ವಿದ್ವಾಂಸರು ಕೂಡ ತಮ್ಮ ಅಭಿಪ್ರಾಯಗಳನ್ನು ಮರು ರೂಪಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗುತ್ತಿದೆ. ಅನ್ಯ ಅಥವಾ ಪ್ರಬಲ ಭಾಷೆಗಳು ಹಾಗೂ ಅವುಗಳ ಭಾಷಿಕ, ಸಾಂಸ್ಕೃತಿಕ ಪರಿಕರಗಳು ಉದಾರವಾಗಿದ್ದರೆ, ಸ್ಥಳೀಯ ಮತ್ತು ಸಣ್ಣ ಸಮುದಾಯಗಳ ಸಾಂಸ್ಕೃತಿಕ, ಭಾಷಿಕ ಚಹರೆಗಳು ಮತ್ತು

ಸ್ಮೃತಿಗಳನ್ನು ಗೌರವಿಸುವ ಮನಸ್ಥಿತಿ ಹೊಂದಿದ್ದರೆ ಯಾವ ಬಗೆಯ ಆತಂಕವೂ ಇರುವುದಿಲ್ಲ. ಒಂದು ವೇಳೆ ಅನ್ಯ ಅಥವಾ ಪ್ರಬಲ ಭಾಷೆ ಆಕ್ರಮಣಕಾರಿಯಾಗಿದ್ದರೆ, ಗುಡಿಸಿಹಾಕುವ ಮನೋಧರ್ಮ ಹೊಂದಿದ್ದರೆ ಎದುರಿಸುವುದಾದರೂ ಹೇಗೆ? ಒಂದೋ ಪ್ರತಿ ದಾಳಿ ನಡೆಸಬೇಕು ಇಲ್ಲವೇ ಅಸಹಾಯಕವಾಗಿ ಶರಣಾಗಬೇಕು ಅಥವಾ ಮುಖ ಮುಚ್ಚಿಕೊಂಡು ಸ್ವತಃ ಜಾಗ ತೆರವು ಮಾಡಬೇಕು. ಸಮಸ್ಯೆಯೆಂದರೆ, ಇವುಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಂಡರೂ ಗೌರವವಿಲ್ಲದಂತಹ ದಯನೀಯ ಸ್ಥಿತಿ.

ಒಂದೆಡೆ, ಸ್ಥಳೀಯ ಪ್ರಧಾನ ಭಾಷೆಗಳು ಪ್ರಬಲ ಅನ್ಯಗಳು ಮತ್ತು ಸಾಂಸ್ಕೃತಿಕವಾಗಿ ಬಲಾಢ್ಯವಾದ ಭಾಷೆಗಳ ಎದುರು ಉಳಿವಿನ ಹೋರಾಟ ನಡೆಸುತ್ತಿದ್ದರೆ, ಇನ್ನೊಂದೆಡೆ ಅಲ್ಪಸಂಖ್ಯೆಯ ನುಡಿಗರಿರುವ ಸ್ಥಳೀಯ ಭಾಷೆಗಳು ಸ್ಥಳೀಯ ಪ್ರಧಾನ ಭಾಷೆಗಳ ಎದುರು ಉಳಿವಿನ ಹೋರಾಟ ನಡೆಸುತ್ತಿರುತ್ತವೆ. ಅದರೊಂದಿಗೆ, ಒಂದು ಭಾಷೆಯೊಳಗಿನ ಹಲವು ಭಾಷಿಕ ರೂಪಗಳಿಗೆ ಪ್ರಮಾಣಿತ ಅಥವಾ ಶಿಷ್ಟ ರೂಪದ ಎದುರು ತನ್ನ ಚಹರೆಗಳನ್ನು ಕಾಪಾಡಿಕೊಳ್ಳುವ ಹವಣಿಕೆಯೂ ಸಕ್ರಿಯವಾಗಿರುತ್ತದೆ. ಪ್ರತಿರೋಧಗಳಿಗೆ ಸ್ಥೈರ್ಯ ಸಾಕಾಗದ ಸಂದರ್ಭದಲ್ಲಿ ಅನುಸಂಧಾನ, ಸಾಮರಸ್ಯ, ಕೊಡುಕೊಳ್ಳುವಿಕೆ ಮುಂತಾದ ಜಾಣ ವ್ಯವಹಾರಗಳ ಮೂಲಕ ನಿರಂತರವಾಗಿ ತಮ್ಮ ಅಸ್ತಿತ್ವದ ಉಳಿವಿನ ಅವಕಾಶಗಳನ್ನು ಹುಡುಕುತ್ತಿರುತ್ತವೆ.

ಭಾಷೆಗಳ ನಡುವೆ ಅನುಮಾನ ಮತ್ತು ಸಂಘರ್ಷಗಳು ತಾರಕಕ್ಕೇರುವುದು ಶಿಕ್ಷಣಕ್ಕೆ ಸಂಬಂಧಿಸಿದ ವಿದ್ಯಮಾನಗಳಲ್ಲಿ. ಉದಾಹರಣೆಗೆ, ಸಂಸ್ಕೃತ ಎಲ್ಲರಿಗೂ ತಲುಪುವ ಔದಾರ್ಯವನ್ನು ಮೊದಲಿನಿಂದ ತೋರದೆ ಇದ್ದುದರಿಂದ ಆಧುನಿಕ ಪೂರ್ವ ಮತ್ತು ನಂತರದ ದಿನಗಳಲ್ಲಿ ಜನಸಾಮಾನ್ಯರ ಶಿಕ್ಷಣದ ವಾಹಕವಾಗಲಿಲ್ಲ. ಆದರೆ ಅದಕ್ಕೆ ಆರೋಪಿಸಲಾಗಿದ್ದ ದೈವಿಕ ಪ್ರಭಾವಳಿ ಮತ್ತು ಆಳುವ ಶಕ್ತಿಗಳ ಜೊತೆಗಿನ ಒಡನಾಟವು ಪರೋಕ್ಷವಾಗಿ ಸಾಮಾನ್ಯರ ಮತ್ತು ಶೂದ್ರಾತಿಶೂದ್ರರ ಮನೋಲೋಕವನ್ನು ಹಿಡಿತದಲ್ಲಿ ಇರಿಸಿಕೊಳ್ಳಲು ನೆರವಾಗಿತ್ತು. ಹತ್ತೊಂಬತ್ತನೆಯ ಶತಮಾನದ ಕೊನೆಯ ಹೊತ್ತಿಗಾಗಲೇ ಶಿಕ್ಷಣವು ಮಠ ಮತ್ತು ಅಗ್ರಹಾರಗಳ ವ್ಯಾಪ್ತಿಯನ್ನು ದಾಟಿ ಸಮಾಜಮುಖಿ ಆಗತೊಡಗಿತ್ತು. ಅದರಲ್ಲೂ ಕಲಿಕೆಯ ಪರಿಕರಗಳ ಮತ್ತು ಮಾನದಂಡಗಳ ಸ್ವರೂಪವೇ ಬದಲಾಗತೊಡಗಿದ ಕೂಡಲೇ ಸಂಸ್ಕೃತವು ತನ್ನ ಪ್ರಭಾವ ವಲಯದಿಂದ ದೊಡ್ಡ ಸಮಾಜವೊಂದು ನಿಧಾನವಾಗಿ ಹೊರ ಸರಿಯತೊಡಗುತ್ತಿರುವುದರ ಬಗ್ಗೆ ಆತಂಕ ಪಡತೊಡಗಿತ್ತು. ಬ್ರಿಟಿಷ್ ಆಳ್ವಿಕೆಯ ಕಾಲದ ಶಿಕ್ಷಣ ವ್ಯವಸ್ಥೆಯಲ್ಲಿ ಇಂಗ್ಲೀಷ್‌ಗೆ ನೇರ ಪರ್ಯಾಯವೆನ್ನುವ ನೆಲೆಯಲ್ಲಿ ನಿಲ್ಲಬಯಸಿದ ಅದರ ಪ್ರಯತ್ನಕ್ಕೆ ನಿರೀಕ್ಷಿತ ಪ್ರಮಾಣದ ಫಲ ಸಿಗಲಿಲ್ಲವಾದ್ದರಿಂದ ಅದು ಬೇರೆ ರೂಪದಲ್ಲಿ ತನ್ನನ್ನು ಸ್ಥಾಪಿಸಿಕೊಳ್ಳಲೆತ್ನಿಸಿತು.

ಆಧುನಿಕ ಎನ್ನಬಹುದಾದ ಸಾಮುದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ದೇಶ ಭಾಷೆಗಳ ಮೂಲಕ ಕಲಿಕೆಗೆ ಆರಂಭದಲ್ಲಿ ಸ್ವಲ್ಪ ಮಟ್ಟಿಗೆ ಅವಕಾಶ ಸಿಕ್ಕಿದ್ದರಿಂದ

ಕೆಳಸ್ತರದ ಬಹುಸಂಖ್ಯಾತ ಕನ್ನಡ ಜನ ಸಂಸ್ಕೃತದ ಹಂಗಿನಿಂದ ಪಾರಾಗುವ ಅವಕಾಶ ಇತ್ತು. ಆದರೆ ಆಗಲೂ ಸಂಸ್ಕೃತ ಪಾಂಡಿತ್ಯ ಪಡೆದವರ ನೆರವಿನ ಮೂಲಕವೇ ಆ ಸಂದರ್ಭದ ಶಿಕ್ಷಣದ ರೂಪುರೇಷೆ ನಿರ್ಧರಿಸಬೇಕಾದ ಅನಿವಾರ್ಯ ಎದುರಾಯಿತು. ಹಾಗಾಗಿ ಸಂಸ್ಕೃತ ಮತ್ತು ಸಂಸ್ಕೃತ ಪಂಡಿತ ಪರಂಪರೆಯು ಪಠ್ಯಪುಸ್ತಕಗಳ ಮೂಲಕ ತನ್ನ ಯಜಮಾನ ಸ್ಥಾನಕ್ಕಾಗಿ ಇನ್ನಿಲ್ಲದ ಪ್ರಯತ್ನ ನಡೆಸಿ ದೊಡ್ಡ ಯಶಸ್ಸನ್ನೇ ಪಡೆದಿದ್ದನ್ನು, ಹಲವು ದಶಕಗಳ ಕಾಲ ಕನ್ನಡದ ಮನಸ್ಸುಗಳನ್ನು ಹಾದಿ ತಪ್ಪಿಸಿದ್ದನ್ನು ಕೆಲವು ವಿದ್ವಾಂಸರು ಸಮರ್ಥವಾಗಿ ಗುರುತಿಸಿದ್ದಾರೆ.

ಭಾರತದಲ್ಲಿ ಇಂಗ್ಲೀಷ್ ಭಾಷೆಯ ಮೂಲಕ ಶಿಕ್ಷಣ ಕ್ರಮವನ್ನು ಅಧಿಕೃತಗೊಳಿಸುವ ನಿಟ್ಟಿನಲ್ಲಿ ಲಾರ್ಡ್ ವಿಲಿಯಂ ಬೆಂಟಿಂಕ್‌ನ ಆದೇಶದ ಮೇರೆಗೆ 1835 ರ ಫೆಬ್ರುವರಿ 2 ರಂದು ಥಾಮಸ್ ಮೆಕಾಲೆ ತಯಾರಿಸಿ ಸಲ್ಲಿಸಿದ ಪ್ರಸಿದ್ಧ ವರದಿಯು ಬ್ರಿಟಿಷ್ ಸರ್ಕಾರ ಶಿಕ್ಷಣಕ್ಕೆಂದು ಮೀಸಲಿರಿಸಿದ ಎಲ್ಲ ಹಣವನ್ನು ಇಂಗ್ಲೀಷ್ ಮಾಧ್ಯಮದಲ್ಲಿ ನೀಡಲಾಗುವ ಶಿಕ್ಷಣಕ್ಕೆ ಮಾತ್ರ ಬಳಸುವ ಸ್ಥಿತಿಯನ್ನು ಸೃಷ್ಟಿಸಿತು. ಆನಂತರ ಹಲವು ಸಂದರ್ಭಗಳಲ್ಲಿ ಬ್ರಿಟಿಷ್ ಸರ್ಕಾರವೇ ತನ್ನ ತಪ್ಪನ್ನು ತಿದ್ದಿಕೊಳ್ಳುವ ಸಲುವಾಗಿ ಪ್ರಾದೇಶಿಕ ಭಾಷೆಗಳಲ್ಲಿ ಶಿಕ್ಷಣ ನೀಡುವ ನೀತಿಗಳನ್ನು ಜಾರಿಗೊಳಿಸಲೆತ್ನಿಸಿತು. 1917 ರಲ್ಲಿ ಸರ್ ಮೈಕೆಲ್ ಸ್ಯಾಡ್ಲರ್ ಸಲ್ಲಿಸಿದ ವರದಿಯ ಫಲವಾಗಿ 1920 ರ ನಂತರ ಭಾರತದಾದ್ಯಂತ ಕಾಲೇಜುಗಳಿಗೆ ಮತ್ತು ವಿಶ್ವವಿದ್ಯಾಲಯಗಳಿಗೆ ಮಾತ್ರ ಇಂಗ್ಲೀಷ್ ಮಾಧ್ಯಮದ ಶಿಕ್ಷಣವು ಸೀಮಿತವಾಯಿತು. ಬಹುಪಾಲು ಅದು ಸೂಕ್ತ ಕ್ರಮವೇ ಆಗಿತ್ತು.

ಆದರೆ ಈ ಹೊತ್ತಿನ ತನಕ ಕರ್ನಾಟಕದ ಶಿಕ್ಷಣದಲ್ಲಿ ಕಲಿಕೆಯ ಮಾಧ್ಯಮದ ಭಾಷೆ ಯಾವುದಾಗಿರಬೇಕು? ಇಂಗ್ಲಿಷ್ ಭಾಷೆಯೇ? ದೇಶೀಯವಾಗಿ ಹೆಚ್ಚು ಬಳಕೆಯ ವ್ಯಾಪ್ತಿ ಪಡೆದಿರುವ ಭಾಷೆಯೇ ಅಥವಾ ಯಾವುದೇ ಸ್ಥಳೀಯ ಭಾಷೆಯೇ? ಸ್ಥಳೀಯ ಭಾಷೆಯೇ ಕಲಿಕೆಯ ಮಾಧ್ಯಮವಾಗಿದ್ದಾಗ ಆ ಭಾಷೆಯ ಯಾವ ಕಾಲಘಟ್ಟದ, ಯಾವ ಪ್ರದೇಶದ, ಯಾವ ರೂಪದ ಭಾಷೆಗೆ ಪಠ್ಯದಲ್ಲಿ ಆದ್ಯತೆ ಸಿಗಬೇಕು? ಹಾಗೆಯೇ ಕಲಿಕೆಯ ಮಾಧ್ಯಮವಾಗಬಹುದಾದ ಆ ಸ್ಥಳೀಯ ಭಾಷೆ ಯಾವುದು? ಆ ಪ್ರದೇಶದ ಬಹುಸಂಖ್ಯಾತರ ಭಾಷೆಯೇ ಅಥವಾ ಅಲ್ಲಿ ಬಳಕೆಯಲ್ಲಿರುವ ಭಾಷೆಗಳೆಲ್ಲವೂ ಕಲಿಕೆಯ ಮಾಧ್ಯಮದ ಅರ್ಹತೆಯನ್ನು ಹೊಂದಿರುವ ಭಾಷೆಗಳು ಎನಿಸಿಕೊಳ್ಳುತ್ತವೆಯೇ? ಇಂತಹ ಚರ್ಚೆ ಮುನ್ನೆಲೆಗೆ ಬಂದರೆ ಪ್ರತಿಯೊಂದು ಸ್ಥಳೀಯ ಭಾಷೆಯು ನಿಲ್ಲಬೇಕಾದ ಸ್ಥಾನ ಯಾವುದು ಮತ್ತು ಆ ಬಗೆಯ ಸ್ಥಾನಸೂಚಿಗೆ ಅನುಸರಿಸಲಾಗುವ ಮಾನದಂಡಗಳು ಯಾವುವು? ಇಂಗ್ಲಿಷ್ ಭಾಷೆ ಕಲಿಕೆಯ ಮಾಧ್ಯಮವಾಗಿರುವ ಹಾಗೂ ಆಗುವ ಸಂದರ್ಭಗಳಲ್ಲಿ ದೇಶವ್ಯಾಪಿಯ ಭಾಷೆ ಮತ್ತು ಸ್ಥಳೀಯರ ಭಾಷೆಗಳ ಸ್ಥಾನಮಾನ ಯಾವುದು? ಆ ಎಲ್ಲ ಪ್ರಶ್ನೆಗಳು ಸತತವಾಗಿ ಚರ್ಚೆಗೆ ಒಳಪಡುತ್ತಿದ್ದರೂ ಉತ್ತರ ಮಾತ್ರ ಅಸ್ಪಷ್ಟ.

ಹಾಗಾಗಿಯೇ ಕನ್ನಡದ ಕಲಿಕೆ, ಬಳಕೆ, ಅಧ್ಯಯನ ಮತ್ತು ಬೋಧನೆಗಳಿಗೆ

ಸಂಬಂಧಿಸಿದಂತೆ ವಿಪರೀತ ಗೋಜಲಿನ ಸ್ಥಿತಿಯಿದೆ. ಭಾಷಾ ವಿದ್ವಾಂಸರು, ಶಿಕ್ಷಣತಜ್ಞರು, ಬೋಧಕರು, ಆಸಕ್ತ ಸಾಮಾಜಿಕರು, ಶಿಕ್ಷಣ ಕ್ಷೇತ್ರದ ನೀತಿರೂಪಕರ ಸ್ಥಾನದಲ್ಲಿರುವ ಅಧಿಕಾರ ವರ್ಗ ಮತ್ತು ರಾಜಕಾರಣಿಗಳು, ಕನ್ನಡದ ಅಸ್ಮಿತೆಯ ಉಳಿವಿಗಾಗಿ ಶ್ರಮಿಸುವವರು, ಭಾಷೆ ಮತ್ತು ಕಲಿಕೆಯ ಕ್ರಮಗಳನ್ನು ಸಾಂಸ್ಕೃತಿಕ ಅಧಿಪತ್ಯದ ಸ್ಥಾಪನೆ ಅಥವಾ ಮುಂದುವರಿಕೆಯ ಉದ್ದೇಶದ ಅಸ್ತ್ರವಾಗಿಸಿಕೊಂಡಿರುವವರು ಇಲ್ಲವೇ ವರ್ಗ ಶ್ರೇಣೀಕರಣವನ್ನು ಇನ್ನಷ್ಟು ಬಲವತ್ತರಗೊಳಿಸಲು ಯತ್ನಿಸುವವರು, ಕಲಿಕೆಯ ಮಾಧ್ಯಮದ ಬಗೆಗೆ ಸಮುದಾಯದಲ್ಲಿ ಸೃಷ್ಟಿಯಾಗಿರುವ ಭಾವೋನ್ಮಾದವನ್ನು ಉದ್ದೀಪಿಸುತ್ತ ಲಾಭ ದೋಚಲೆತ್ನಿಸುವ ಶಿಕ್ಷಣ ವ್ಯಾಪಾರಿಗಳು, ಶಿಕ್ಷಣವನ್ನು ಒದಗಿಸುವುದು ಸಾಮಾಜಿಕ ಮತ್ತು ನೈತಿಕ ಹೊಣೆಗಾರಿಕೆ ಎಂದು ಯೋಚಿಸುವವರು, ಇಂಗ್ಲಿಷ್ ಕಲಿಕೆಯು ಶತಮಾನಗಳ ಕಾಲದ ಅವಮಾನಗಳಿಂದ, ದೈನೇಸಿ ಬದುಕಿನಿಂದ ಬಿಡುಗಡೆ ಹೊಂದಲು ಸಿಗುತ್ತಿರುವ ಅಸಾಮಾನ್ಯ ಅವಕಾಶವೆಂದು ನಂಬುತ್ತಿರುವ ದಲಿತ ಹಾಗೂ ಹಿಂದುಳಿದ ಸಮುದಾಯಗಳು, ಇಂಗ್ಲಿಷನ್ನು ತಮ್ಮ ಸೊಫಿಸ್ಟಿಕೇಟೆಡ್ ಬದುಕಿನ ಅವಿಭಾಜ್ಯ ಭಾಗ ಎಂದು ಭಾವಿಸಿರುವ ಪ್ರತಿಷ್ಠಿತ ವರ್ಗಗಳು–ಇವೆಲ್ಲದರಿಂದ ಸ್ಥಳೀಯ ಹಾಗೂ ಪ್ರಾದೇಶಿಕ ಭಾಷೆಗಳ ಕುರಿತ ಚರ್ಚೆ ಬಲು ಸಂಕೀರ್ಣ ಹಂತಕ್ಕೆ ತಲುಪಿದೆ. ಹಾಗಾಗಿ ಸರ್ಕಾರಗಳೂ ದಿಟ್ಟ ಇಲ್ಲವೇ ಸರ್ವ ಸ್ವೀಕೃತವಾಗಬಹುದಾದ ನಿಲುವು ತಳೆಯಲು ಸಾಧ್ಯವಾಗದೇ ಸುದೀರ್ಘ ಕಾಲದಿಂದ ತಿಣುಕುತ್ತಿವೆ. ಕಲಿಯುವ ಭಾಷೆಯಾಗಿ ಮತ್ತು ಕಲಿಕೆಯ ಮಾಧ್ಯಮದ ಭಾಷೆಯಾಗಿ ಸ್ಥಳೀಯ ಭಾಷೆಯ ಸ್ಥಾನ ನಿರ್ಣಯ, ಅದರ ಕಲಿಕೆಯ ಪರಿಕರವಾದ ಪಠ್ಯದ ಸ್ವರೂಪ, ಕಲಿಕೆಯ ಪರಿಸರ, ಪಠ್ಯದ ಅಧ್ಯಯನ ಕ್ರಮ, ಬೋಧನಾ ವಿಧಾನ ಇವೆಲ್ಲ ಬೇರೆ ಬೇರೆ ಸಂದರ್ಭಗಳ ತತ್ಕಾಲೀನ ತೀರ್ಮಾನಗಳಾಗುತ್ತಿರುವುದನ್ನು ಗಮನಿಸಬಹುದಾಗಿದೆ. ಆದ್ದರಿಂದಲೇ ಕಲಿಯಬೇಕಾದ ಭಾಷೆ ಮತ್ತು ಕೈಯಲ್ಲಿ ಹಿಡಿಯಬೇಕಾದ ಪಠ್ಯಪುಸ್ತಕ ಯಾವುದೆನ್ನುವ ಗೊಂದಲ ದಶಕಗಳಿಂದ ಮುಂದುವರಿಯುತ್ತಲೇ ಇದೆ.

ಈ ಗೊಂದಲಗಳ ಪರಿಣಾಮವೆಂದರೆ, ಇವೊತ್ತು ಇಂಡಿಯಾದ ಅದರಲ್ಲೂ ಕರ್ನಾಟಕದ ಜನರ ಅಗಾಧ ಸಂಪತ್ತು ಇಂಗ್ಲೀಷ್ ಮಾಧ್ಯಮದ ಶಿಕ್ಷಣಕ್ಕಾಗಿ ವಿನಿಯೋಗವಾಗುತ್ತಿದೆ. ಸಮಾಜದ ಕೆಳವರ್ಗಗಳ ಜನ ತಮ್ಮ ದುಡಿಮೆಯನ್ನೆಲ್ಲ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ಸುರಿಯುತ್ತಿರುವುದರಿಂದ ಆ ಸಮುದಾಯಗಳು ಆರ್ಥಿಕವಾಗಿ ಅತ್ಯಂತ ದಯನೀಯ ಸ್ಥಿತಿಗೆ ತಲುಪುತ್ತಿವೆ. ಸಾಲದೆನ್ನುವಂತೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ನಾಯಿಕೊಡೆಗಳಂತೆ ತಲೆಯೆತ್ತಿರುವ ಇಂಗ್ಲೀಷ್ ಮಾಧ್ಯಮದ ಶಾಲೆಗಳಲ್ಲಿ ವಿಷಯ ಜ್ಞಾನ, ಭಾಷಿಕ ಕೌಶಲ್ಯಗಳ ತಿಳುವಳಿಕೆ, ಅಗತ್ಯ ತರಬೇತಿ ಇವೇನೂ ಇಲ್ಲದ ಶಿಕ್ಷಕರೇ ಹೆಚ್ಚಿನ ಸಂಖ್ಯೆಯಲ್ಲಿ ತುಂಬಿರುವುದರಿಂದ ಇಂಥ ಶಾಲೆಗಳಿಂದ ಕಲಿತು ಬರುವ ಎಳೆಯ ಮನಸ್ಸುಗಳು ಗೋಜಲುಗಳ ಮೂಟೆಗಳಾಗುವುದರಲ್ಲಿ ಸಂಶಯವಿಲ್ಲ. ಈ ಮಕ್ಕಳಿಗೆ ಮಾತೃಭಾಷೆಯನ್ನು ಶೈಕ್ಷಣಿಕ ಪರಿಸರದಲ್ಲಿ ಬಳಸುವ ಮತ್ತು ಅದರ

ಬಳಕೆಯ ಸಾಧ್ಯತೆಗಳನ್ನು ದಕ್ಕಿಸಿಕೊಳ್ಳುವ ಅವಕಾಶಗಳು ತೀರಾ ಕಡಿಮೆ ಇರುತ್ತದೆ. ಈ ಮಕ್ಕಳಿಗೆ ಹೆತ್ತವರ ತ್ಯಾಗ ಮತ್ತು ಶ್ರಮದ ಮೂಲಕ ಗಳಿಸಲೆತ್ನಿಸಿದ ಇಂಗ್ಲೀಷ್ ಜ್ಞಾನವೂ ಸರಿಯಾದ ಕ್ರಮದಲ್ಲಿ ಸಿಗದೆ, ತಾಯಿ ನುಡಿಯನ್ನೂ ಸರಿಯಾಗಿ ಬಳಸಲಾಗದೆ ತಮ್ಮ ಸುತ್ತಲ ಬದುಕಿನ ಜೊತೆಗಿನ ಅವರ ಸಂಬಂಧ ವಿಕಲಗೊಂಡಿದೆ. ಹೀಗಾಗಿ ಭಾಷಿಕವಾಗಿ ದಿಕ್ಕುಗೆಟ್ಟ ಸ್ಥಿತಿ ಈ ಮಕ್ಕಳದು.

ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಯದ, ಇಂಗ್ಲೀಷನ್ನು ಮಾತನಾಡದಿರುವ ಜನಾಂಗಗಳು ಮನುಷ್ಯರೇ ಅಲ್ಲ, ಸ್ಪರ್ಧೆ ಮತ್ತು ಯಶಸ್ಸಿನ ಕಲ್ಪನೆಯನ್ನು ಆಧರಿಸಿದ ಬಂಡವಾಳಶಾಹಿ ಸಮಾಜದ ಮೌಲ್ಯಗಳಿಗೆ ಅನುಸಾರವಾಗಿ ವರ್ತಿಸದಿದ್ದರೆ, ಬದುಕದಿದ್ದರೆ ಅದು ಬದುಕೇ ಅಲ್ಲ ಎಂಬಂತಹ ಧೋರಣೆಗಳು ಸಾಮೂಹಿಕ ಸನ್ನಿಯಂತೆ ಹಬ್ಬಿಕೊಂಡಿರುವ ಈಗಿನ ಸ್ಥಿತಿಯಲ್ಲಿ ಇಂತಹ ಅತಾರ್ಕಿಕ ಶಿಕ್ಷಣ ವ್ಯವಸ್ಥೆಗಳು ರೂಪುಗೊಳ್ಳುವುದು ಸಹಜ. ಇದಕ್ಕನುಸಾರವಾಗಿ ಶಾಲಾ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಅನೇಕ ಸ್ಥಳೀಯ ಭಾಷೆಗಳ ಬಳಕೆಯನ್ನು ಹಿಂದುಳಿದಿರುವಿಕೆಯ ಮತ್ತು ದೈನ್ಯದ ಸಂಕೇತವೆಂದು ಭಾವಿಸುವ ಸ್ಥಿತಿಯಿದೆ. ಅದರಲ್ಲೂ ಮುಖ್ಯವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಔದ್ಯೋಗಿಕ ವಲಯಗಳಲ್ಲಿ ಕನ್ನಡದಂತಹ ಸ್ಥಳೀಯ ಭಾಷೆಯನ್ನು ನಿರ್ಬಂಧಿಸುವ ಇಲ್ಲವೇ ಮೂಲೆಗುಂಪಾಗಿಸುವ ಪ್ರಯತ್ನವನ್ನು ನಿರ್ದಾಕ್ಷಿಣ್ಯವಾಗಿ ಮಾಡಲಾಗುತ್ತಿದೆ. ಸಾವಿರಾರು ವರ್ಷಗಳ ಚರಿತ್ರೆಯುದ್ದಕ್ಕೂ ಜನಸಮುದಾಯಗಳು ಶ್ರಮವಹಿಸಿ ರೂಪಿಸಿಕೊಂಡಿರುವ ಸಂವಹನದ ಪರಿಕರಗಳು ಮತ್ತು ಅವುಗಳ ಮೂಲಕ ರೂಪುಗೊಳ್ಳುವ ಜೀವನ ಕ್ರಮಗಳ ಕುರಿತ ಇಂತಹ ದೃಷ್ಟಿಕೋನ ತುಂಬಾ ಅಪಾಯಕಾರಿಯಾದುದು. ಆದ್ದರಿಂದ ಸ್ಥಳೀಯ ಭಾಷೆಗಳ ಸಬಲೀಕರಣಕ್ಕಾಗಿ ಪ್ರಭುತ್ವ ಮತ್ತು ಇನ್ನಿತರ ಸಾಂಸ್ಥಿಕ ಶಕ್ತಿಗಳು ಗಂಭೀರವಾಗಿ ಕಾರ್ಯೋನ್ಮುಖವಾಗಬೇಕಾದ ಅವಶ್ಯಕತೆ ಇದೆ.

ಇನ್ನೊಂದೆಡೆ, ಈ ವಿದ್ಯಮಾನವನ್ನು ಕೆಲವು ಭಾಷೆಗಳ ಮೂಲೆಗುಂಪಾಗುವಿಕೆ ಎಂದು ಭಾವಿಸುವುದಕ್ಕಿಂತ ಆ ಪರಿಸರದಲ್ಲಿನ ಇತರ ಭಾಷೆಗಳಿಗೆ ಜನಸಮುದಾಯ ತನ್ನ ಅಗತ್ಯಗಳನುಸಾರ ನೀಡಿದ ಆದ್ಯತೆಯೆಂದು ಭಾವಿಸಬೇಕಾಗುತ್ತದೆ ಎನ್ನುವ ನಿಲುವುಗಳೂ ಇವೆ. ಆದ್ಯತೆಗಳ ಅನುಕ್ರಮಣಿಕೆ, ಅವಗಣನೆ, ಪರಿಗಣನೆಯ ಆವರ್ತನ ಕ್ರಿಯೆಯೆನ್ನುವುದು ಬಹು ಭಾಷಿಕ ಪರಿಸರದ ಸಹಜ ನಡಾವಳಿ ಎಂದು ಭಾವಿಸಬೇಕಾಗುತ್ತದೆ. ಆದರೂ ಆರ್ಥಿಕ ಮೂಲದ ಶಕ್ತಿಗಳು ಹಾಗೂ ಅದು ರೂಪಿಸುವ ಶೋಷಣೆಯ ವ್ಯವಸ್ಥೆ ಮಾತ್ರವಲ್ಲ, ಸಮಾಜವೊಂದು ಅವಲಂಬಿಸಿರುವ ಶಿಕ್ಷಣಕ್ರಮವೂ ಆ ಸಮಾಜದ ಜನರ ವಿಶಿಷ್ಟ ಭಾಷಿಕ ಮತ್ತು ಸಾಂಸ್ಕೃತಿಕ ಚಹರೆಗಳನ್ನು ನಾಶಮಾಡುತ್ತದೆ ಎನ್ನುವ ಎಚ್ಚರ ಸಮಾಜವೊಂದಕ್ಕೆ ಇರಬೇಕಾಗುತ್ತದೆ. ಆಗ ಮಾತ್ರ ಅದು ತನ್ನ ಭಾಷೆ ಮತ್ತು ಸಂಸ್ಕೃತಿಯ ಅಸ್ಮಿತೆಗಳು ಹಠಾತ್ ಪಲ್ಲಟಕ್ಕೆ ಒಳಗಾಗುವುದನ್ನು ತಡೆಯಬಹುದಾಗಿದೆ.

ಭಾಷೆಯೊಂದರ ಬಗೆಗಿನ ಕಾಳಜಿಯ ಸಂದರ್ಭದಲ್ಲಿ ನಿರ್ದಿಷ್ಟವಾಗಿ ಮೂರು

ರೀತಿಯ ಧೋರಣೆಗಳನ್ನು ಕಾಣಲು ಸಾಧ್ಯವಿದೆ.

1. ಶಿಕ್ಷಣದಲ್ಲಿ ಮಾರ್ಪಾಡುಗಳು ಆಗುವ ಮುಂಚೆ ಆ ಜನಸಮುದಾಯದ ಯೋಚನಾಕ್ರಮದಲ್ಲಿ, ಪ್ರಭುತ್ವಗಳ ನೀತಿಗಳಲ್ಲಿ ಬದಲಾವಣೆ ಆಗಬೇಕು.
2. ಶಿಕ್ಷಣ ಕ್ರಮವು ಸ್ಥಳೀಯ ಭಾಷೆಯ ಉಳಿವಿನ ವಿಚಾರದಲ್ಲಿ ವಿಫಲವಾದರೆ ಸಮಾಜ ಮತ್ತು ಶಾಲಾ ವ್ಯವಸ್ಥೆಗಳೆರಡೂ ಆ ಭಾಷೆಯನ್ನು ಅದರ ಎಲ್ಲಾ ಸಾಧ್ಯತೆಗಳ ಸಹಿತ ಕಲಿಯುವ ಹಾಗೂ ಕಲಿಸುವ ಜವಾಬ್ದಾರಿ ತೋರಬೇಕು.
3. ಪ್ರಭುತ್ವಗಳೂ ತನ್ನ ಕಾನೂನುಗಳ ಮೂಲಕ ಇಂತಹ ಪ್ರಯತ್ನವನ್ನು ಬೆಂಬಲಿಸಬೇಕು.

ಸಮಾಜವನ್ನು ಸಂರಚಿಸುವ ಶಕ್ತಿಗಳಲ್ಲಿ ಶಿಕ್ಷಣ ವ್ಯವಸ್ಥೆಯೂ ಒಂದು ಎನ್ನುವ ಅಭಿಪ್ರಾಯ ಮೊದಲನೆಯದು; ಸಮಾಜವು ಎಲ್ಲ ಪರಿವರ್ತನೆಗಳ ಮೂಲ, ಶಿಕ್ಷಣ ಕ್ರಮದಲ್ಲಿನ ಬದಲಾವಣೆಗಳು ಸಮಾಜದ ಬದಲಾವಣೆಗಳನ್ನು ಆಧರಿಸಿದೆ ಎನ್ನುವುದು ಮತ್ತೊಂದು ರೀತಿಯ ಅಭಿಪ್ರಾಯ; ಪ್ರಭುತ್ವಗಳು ಭಾಷೆಯೊಂದರ ಉಳಿವಿನ ವಿಚಾರದಲ್ಲಿ ಹೊಣೆಗಾರಿಕೆಯಿಂದ ದೂರ ಉಳಿಯುವುದು ಅಸಾಧ್ಯ ಹಾಗೂ ಅದು ಸರಿಯಾದ ಕ್ರಮವೂ ಅಲ್ಲ ಎನ್ನುವುದು ಮೂರನೇ ಅಭಿಪ್ರಾಯ.

ಇವೆಲ್ಲವೂ ಕೆಳಸ್ತರದ ಭಾಷೆಗಳ ಪರವಾದ ಚಿಂತನೆಗಳೆನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಈ ಬಗೆಯ ಚಿಂತನೆಗಳೂ ಒಂದು ಹಂತದ ಭಾಷೆಗಳವರೆಗೆ ಬಂದು ಸುಮ್ಮನಾಗಿಬಿಡುತ್ತವೆ. ಏಕೆಂದರೆ, ಈ ಹಂತದಲ್ಲಿ ಸ್ಥಳೀಯ ಭಾಷೆಗಳ ಸಂಖ್ಯಾಪ್ರಮಾಣ ಹೆಚ್ಚಿರುತ್ತದೆ. ಮೊದಲೇ ಪ್ರಸ್ತಾಪಿಸಿದಂತೆ ಇವುಗಳ ನಡುವಿನ ಸಂಬಂಧ ಸಂಕೀರ್ಣ ಸ್ವರೂಪದ್ದಾಗಿರುತ್ತದೆ. ಅದರೊಂದಿಗೆ ಇಲ್ಲಿ ಸ್ಥಳೀಯ ಎನ್ನುವ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವ ಬಗೆ ಹೇಗೆ ಎನ್ನುವ, ಸ್ಥಳೀಯವಾಗಿ ಯಾವುದು ಪ್ರಧಾನ ಯಾವುದು ಪ್ರಧಾನವಲ್ಲದ್ದು ಎನ್ನುವ ಹಲವು ತರದ ಸಮಸ್ಯೆಗಳಿವೆ. ಭಾಷಿಕ ಪರಿಸರದಲ್ಲಿರುವ ಹಲವು ಸ್ಥಳೀಯ ಭಾಷೆಗಳ ಪೈಕಿ ಹಳೆಯದಾದ, ಹೆಚ್ಚು ಸಂಖ್ಯಾಬಾಹುಳ್ಯವಿರುವ, ಸಾಂಸ್ಕೃತಿಕ ನೆಲೆಯಲ್ಲಿ ಸ್ಥಳೀಯವಾಗಿ ಆಳ ಬೇರು ಹೊಂದಿದ, ಪ್ರಭುತ್ವದ ಸಹಾನುಭೂತಿ ಪಡೆದ ಭಾಷೆ ಸಹಜವಾಗಿ ಪ್ರಧಾನ ಸ್ಥಳೀಯ ಭಾಷೆ ಎನ್ನುವ ಸ್ಥಾನಗೌರವ ಗಳಿಸುವುದರಿಂದ ಅದರ ಉಳಿವಿಗಾಗಿ ಪೂರಕವಾದ ಭಾಷಾನೀತಿಗಳ ಕಡೆಗೇ ಪ್ರಭುತ್ವಗಳ ಒಲವೂ ಹರಿಯುತ್ತದೆ. ಹಾಗಾಗಿ ನೂರಾರು ವರ್ಷಗಳಿಂದ ಅಲ್ಲಿಯೇ ಇದ್ದು ಆ ನಾಡಿನ ಎಲ್ಲಾ ಆಗುಹೋಗುಗಳಲ್ಲಿ ಭಾಗಿಯಾದ ಇತರ ಭಾಷಿಕ ಸಮುದಾಯಗಳಲ್ಲಿ ಅಸಹನೆ ಬೆಳೆಯುತ್ತದೆ.

ಬಹುಭಾಷಿಕ ವ್ಯವಸ್ಥೆಯಲ್ಲಿನ ಈ ಬಗೆಯ ಅಸಮಾನ ಆದ್ಯತೆಗಳು ಮತ್ತು ಪರಸ್ಪರ ಅಸಹನೆಗಳು ಮುಂದುವರಿಯುತ್ತಲೇ ಹೋದರೆ ಅನ್ಯ ಪ್ರಬಲವೊಂದು ಸಹಜವಾಗಿಯೇ ಏಕಸ್ವಾಮ್ಯ ಸಾಧಿಸುತ್ತದೆ; ಸ್ಥಳೀಯ ಭಾಷೆಗಳು ಸಂಪೂರ್ಣ ಅಪ್ರಸ್ತುತಗೊಂಡು ಬಹುಭಾಷಿಕತೆಯ ಬಹುರೂಪಿಯಾದ ಬದುಕು ಇಲ್ಲವಾಗುತ್ತದೆ.

ಪರಾಮರ್ಶನ ಕೃತಿಗಳು:

1. ಚಲಪತಿ ಆರ್., (2026), ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ, ಬೆಂಗಳೂರು: ರಾಸೀ ಪ್ರಕಾಶನ.
2. ಶ್ರೀಪಾದ ಭಟ್ ಬಿ., (2023), ಕಣ್ಕಟ್ಟು, ಆನೇಕಲ್: ಕೌದಿ ಪ್ರಕಾಶನ.
3. ರೋಮಿಲಾ ಥಾಪರ್, (2017), ರಾಷ್ಟ್ರೀಯತೆ, ಮೈಸೂರು: ಅಭಿರುಚಿ ಪ್ರಕಾಶನ.
4. ಚಲಪತಿ ಆರ್., (2012), ನಮ್ಮದೇ ತಿಳಿವಿನ ದಾರಿಯಲ್ಲಿ, ಚನ್ನಪಟ್ಟಣ: ಪಲ್ಲವ ಪ್ರಕಾಶನ.
5. ಅಮರೇಂದ್ರ ಹೊಲ್ಲಂಬಳ್ಳಿ, (2014), ಮರುಮಾತು, ಬೆಂಗಳೂರು: ಮೇಘ ಪ್ರಕಾಶನ.